ಅಧ್ಯಕ್ಷರು.— ಶ್ರೀಮತಿ ನಾಗರತ್ನಮ್ಮನವರು, ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಶ್ರೀ ಎಂ. ಎಸ್. ಕೃಷ್ಣನ್ ಅವರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ.

ಶ್ರೀ ಬಸವಲಿಂಗಪ್ಪನವರೇ ಸ್ವಲ್ಪ ತಡೆಯಿರಿ I have to go through the records. ಈಗ ನಿಲುವಳಿಯ ಸೂಚನೆಯ ಮೇಲೆ ಪ್ರಿಲಿಮಿನರಿ ಸಬ್‌ಮಿಷನ್. ನಿಲುವಳಿ ಸೂಚನೆಯನ್ನು ಯಾರು ಯಾರು ಕೊಟ್ಟಿದ್ದಾರೆ, ಅಂದರೆ, ಶ್ರೀ ಯಡಿಯೂರಪ್ಪನವರು Telephone ಟ್ಯಾಪಿಂಗ್ ಬಗ್ಗೆ, ಶ್ರೀಮತಿ ನಾಗರತ್ನಮ್ಮನವರು ಒಂದು ಕೊಟ್ಟಿದ್ದಾರೆ. ಶ್ರೀ ಎಂ. ಎಸ್. ಕೃಷ್ಣನ್‌ರವರು ಕೊಟ್ಟಿದ್ದಾರೆ. ಪಂಪಾಪತಿಯವರೇ ತಾವು ಕೊಟ್ಟಿದ್ದೀರಿ, ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.— ನಾನು ಪ್ರಿವಿಲೇಜ್ ಮೋಷನ್ ಕೊಟ್ಟಿದ್ದೇನೆ. ಇದು ಮುಗಿದ ಮೇಲೆ ಅದು ಬರುತ್ತದೆಯೋ ?

ಅಧ್ಯಕ್ಷರು.— ಇದು ಮುಗಿದ ಮೇಲೆ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಈ ಅಕ್ರಮ ಸಾಗುವಳಿ ಬಗ್ಗೆ ಮುಂದಿನ ಅಧಿವೇಶನದ ಮೊದಲನೆಯ ದಿವಸವೇ ಕಾನೂನು ತೆಗೆದುಕೊಂಡು ಬರುತ್ತೇವೆಂದು ಶ್ರೀ ಬೊಮ್ಮಾಯಿಯವರು ಹೋದ ಅಧಿವೇಶನದಲ್ಲಿ ಹೇಳಿದ್ದರು. ಆದರೆ ಅವರು ಆ ರೀತಿ ಮಾಡಲಿಲ್ಲ. ಈಗ ೩-೪ ಸಾವಿರ ರೈತರು ಬಂದಿದ್ದಾರೆ, ನಾನು ೧೦ ಗಂಟೆಗೆ ನೋಟೀಸನ್ನು ಕೊಟ್ಟಿದ್ದೇನೆ. ನನಗೆ ನಿಲುವಳಿ ಸೂಚನೆ ಪ್ರಸ್ತಾಪ ಮಾಡಲು ಅವಕಾಶ ಕೊಡುತ್ತೀರೋ ಇಲ್ಲವೋ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.— ಈ ಸದನ ಪ್ರಾರಂಭವಾಗುವುದಕ್ಕೆ ಮೊದಲೇ ಇದು ಬರಬೇಕಾಗಿತ್ತು, ಇದು ಬಹಳ ಪ್ರಮುಖವಾದ ವಿಚಾರ.

ಶ್ರೀ ಎಸ್. ಆರ್. ಬೊಮ್ಮಾಯಿ.— ಒಂದು ಸಲಹೆ ನಿಲುವಳಿ ಸೂಚನೆಯನ್ನು ವಿರೋಧ ಪಕ್ಷದ ನಾಯಕಿಯವರು ಕೊಟ್ಟಿದ್ದಾರೆ. ಪ್ರಿವಿಲೇಜ್ ಮೋಷನ್ ಶ್ರೀ ಎಂ. ಎಸ್. ಕೃಷ್ಣನ್ ಅವರು ಕೊಟ್ಟಿದ್ದಾರೆ. Telephone ಟ್ಯಾಪಿಂಗ್ ವಿಚಾರ ಇದೆ. ಅಧ್ಯಕ್ಷರ ಜೊತೆಗೆ ಹಾಗೂ ತಮ್ಮ ಜೊತೆ ನಾನು ಚರ್ಚೆ ಮಾಡಿದ್ದೇನೆ. ಈ ವಿಚಾರವನ್ನು ಚರ್ಚೆ ಮಾಡುವುದಕ್ಕೆ ನನ್ನ ಅಡ್ಡಿಯಿಲ್ಲ. ರೂಲ್ ೬೯ರ ಕೆಳಗಡೆ ಡಿಸ್‌ಕಸ್ ಮಾಡಬಹುದು. ಇದನ್ನು ನಾಳೆ ತೆಗೆದುಕೊಳ್ಳಲು ತೀರ್ಮಾನವಾಗಿದೆ.

ಅಧ್ಯಕ್ಷರು.— ನಾಳೆ ಎರಡು ಗಂಟೆಗೆ ಇದನ್ನು ಶುರು ಮಾಡೋಣ.

ಶ್ರೀ ಎಸ್. ಬಂಗಾರಪ್ಪ.— ಇದು ನಿಯಮ ೬೯ರ ಪ್ರಕಾರ ತೆಗೆದುಕೊಳ್ಳತಕ್ಕ ವಿಚಾರ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡೋಣ, ರೂಲ್ ೬೯ ಬೇಡ.

ಶ್ರೀ ಎಸ್. ಬಂಗಾರಪ್ಪ.— ರೂಲ್ ೬೯ರನಲ್ಲಿ ಎರಡೂವರೆ ಗಂಟೆ ವೇಳೆ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇದು ಬರುತ್ತದೆ, ಚರ್ಚೆ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.— ಚರ್ಚೆ ಮಾಡಬಹುದು ಎನ್ನುವುದು ನಿಮ್ಮ ಸಲಹೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುವುದು ಮುಖ್ಯ ನಂತರ ಇದನ್ನು ನಾಳೆ ತೆಗೆದುಕೊಳ್ಳಬೇಕು ಎನ್ನುವುದನ್ನು ತಿಳುವಳಿಕೆ ಮಾಡಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸನ್ನು ಈಗಾಗಲೇ ನಾವು ಕೊಟ್ಟಿದ್ದೇವೆ. ಅದರ ಬಗ್ಗೆ ಪ್ರಿಲಿಮಿನರಿಯಾಗಿ ಮಾನ್ಯ ವಿರೋಧ ಪಕ್ಷದ ನಾಯಕಿಯವರು ಮಾತನಾಡುತ್ತಾರೆ. ನಂತರ ನಾವೆಲ್ಲರೂ ೫-೫ ನಿಮಿಷ ಮಾತನಾಡಬಹುದು. ಮಾತನಾಡಿದ ಮೇಲೆ ಕೊನೆಗೆ ನಾನು ಎದ್ದು ನಿಂತು ಹೇಳುತ್ತೇನೆ. ನಾಳೆ ತೆಗೆದುಕೊಳ್ಳಿ ಎಂದು. ಅದನ್ನು ಬಿಟ್ಟು ನಾಳೆ ತೆಗೆದುಕೊಳ್ಳಿ ಅಂದರೆ ಪ್ರಿಲಿಮಿನರಿ ಸಬ್ಮಿಷನ್...

ಅಧ್ಯಕ್ಷರು.— ಪ್ರಿಲಿಮಿನರಿ ಸಬ್ಮಿಷನ್ ಮಾಡಬಾರದು ಎಂದು ಅವರು ಹೇಳಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಪ್ರಿವಿಲೇಜ್ ಮೋಷನ್‌ನನ್ನು ಸಹ ಅಡ್ಜರ್ನ್‌ಮೆಂಟ್ ಮೋಷನ್ ಜೊತೆಗೆ ತೆಗೆದುಕೊಂಡು ಚರ್ಚೆಮಾಡಿ ಎಂದು ಅವರು ಸಲಹೆ ಕೊಟ್ಟರು. ಪ್ರಿವಿಲೇಜ್ ಮೋಷನ್‌ನನ್ನು ಅಡ್ಜರ್ನ್‌ಮೆಂಟ್ ಮೋಷನ್ ಜೊತೆಗೆ ಸೇರಿಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು.— ಅದನ್ನು ಬೇರೆ ತೆಗೆದುಕೊಳ್ಳೋಣ.

ಶ್ರೀ ಎಂ. ಎಸ್. ಕೃಷ್ಣನ್.— ಪ್ರಿವಿಲೇಜ್ ಮೋಷನ್‌ನನ್ನು ಬೇರೆ ತೆಗೆದುಕೊಳ್ಳಬೇಕು. ನಾವೂ ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಮಾತನಾಡುತ್ತೇವೆ. ಪ್ರಿವಿಲೇಜ್ ಮೋಷನ್‌ನನ್ನು ಬೇರೆ ತೆಗೆದುಕೊಳ್ಳಬೇಕು,

ಶ್ರೀ ಎಸ್. ಆರ್. ಬೊಮ್ಮಾಯಿ.— ಸಬ್ಮಿಷನ್ ಅಂದರೆ ಮೆನ್‌ಷನ್ ಮಾಡುವುದು. ವಿವರವಾದ ಚರ್ಚೆಯಲ್ಲ. ವಿರೋಧಪಕ್ಷದ ನಾಯಕಿಯವರು ಮೆನ್‌ಷನ್ ಮಾಡಬೇಕು, ಎಲ್ಲರೂ ಮಾತನಾಡಬೇಕು ಎಂದು ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೆನ್‌ಷನ್ ಮಾಡಬೇಕು ಎಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ.— ದಯುವಿಟ್ಟು ಒಂದು ವಿಚಾರವನ್ನು ಗಮನಿಸಬೇಕು. ಈ ನೋಟೀಸಿಗೆ ಸಿಗ್ನೇಚರ್ ಹಾಕಿ ಕೊಟ್ಟಿರುವವರು ತುಂಬ ಜನ ಇದ್ದಾರೆ. ಮೊದಲು ತಮ್ಮ ಒಪ್ಪಿಗೆಯನ್ನು ಪಡೆಯುವುದಕ್ಕೋಸ್ಕರ ಪ್ರಿಲಿಮಿನರಿ ಸಬ್ಮಿಷನ್ ನಂತರ ನಿಲುವಳಿ ಸೂಚನೆಯನ್ನು ಸ್ವೀಕಾರ ಮಾಡಬೇಕು ಎಂದು ಅಧ್ಯಕ್ಷರ ಮುಖಾಂತರ ಸದನದ ಗಮನಕ್ಕೆ ತರತಕ್ಕದ್ದು ಮುಖ್ಯವಾದಂಥ ಪ್ರಶ್ನೆ. ಅದಕ್ಕೋಸ್ಕರ ಮಾನ್ಯ ವಿರೋಧಪಕ್ಷದ ನಾಯಕಿಯವರು, ಮತ್ತು ಮಾನ್ಯ ಉಪನಾಯಕರು ಮತ್ತು ನಮ್ಮಲ್ಲಿರತಕ್ಕಂಥ ಕೆಲವು ಜನ ನಾವೆಲ್ಲಾ ಮಾತನಾಡುತ್ತೇವೆ. ವಿಷಯಗಳನ್ನು ಹೇಳೋಣ ವಿವರಗಳಿಗ ನಾವು ಹೋಗುವುದಿಲ್ಲ, ಎಷ್ಟು ಬೇಕೋ ಅಷ್ಟು ಹೇಳುತ್ತೇವೆ.

ಅಧ್ಯಕ್ಷರು.—ಸದನಗ ಗಮನಕ್ಕೆ ತರಲಿ.

ಶ್ರೀ ಎಸ್. ಬಂಗಾರಪ್ಪ.—ಅವರು ಒಬ್ಬರೇ ಅಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ — ನಮ್ಮ ತಿಳುವಳಿಕೆ ಇದ್ದದು ಈರೀತಿ. ಈ ವಿಚಾರದಲ್ಲಿ ವಿರೋಧಪಕ್ಷದ ನಾಯಕರು ಮೆನ್‌ಷನ್ ಮಾಡುತ್ತಾರೆ, ನಾಳೆ ಚರ್ಚೆ ಮಾಡೋಣ ಎಂದು ಆಗಿದೆ. ಎಲ್ಲರೂ ಮಾತನಾಡಬಹುದು, ಅದಕ್ಕೆ ನನ್ನ ಅಡ್ಡಿಯಿಲ್ಲ. ಒಂದು ವಿಚಾರವನ್ನು ನಾನು ಹೇಳಿದ್ದೇನೆ. ಹಿಂದಿನ ಮುಖ್ಯ ಮಂತ್ರಿಗಳಾದಂಥ ಶ್ರೀಮಾನ್ ಹೆಗಡೆಯವರು ಡೆಲ್ಲಿಗೆ ಹೋಗಿದ್ದಾರೆ, ನಾಳೆ ಬರುತ್ತಾರೆ. ಅವರು ಇದ್ದಾಗ ಚರ್ಚೆಯಾಗುವುದು ಒಳ್ಳೆಯದು ಎಂದು ಹೇಳಿದಾಗ ಮಾನ್ಯ ವಿರೋಧ ಪಕ್ಷದ ನಾಯಕಿಯವರು ಒಪ್ಪಿಕೊಂಡಿದ್ದಾರೆ ಆದ್ದರಿಂದ ಇದನ್ನು ನಾಳೆ ತಗೆದುಕೊಳ್ಳೋಣ, ನಾಳೆ ನೀವೆಲ್ಲಾ ಮಾತನಾಡಿ.

ಅಧ್ಯಕ್ಷರು.—ಈಗ ಪ್ರಿಲಿಮಿನರಿ ಸಬ್ಮಿಷನ್‌ಗೆ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿನ್ನೆ ನಾವು ಕ್ಲಾರಿಫಿಕೇಷನ್ ಕೇಳಿದಾಗ ಹೌಸನ್ನು ಅಡ್ಜರ್ನ್‌ಮಾಡಿ ಹೋದಿರಿ.

ಅಧ್ಯಕ್ಷರು.—ಅಡ್ಜರ್ನ್‌ಮಾಡಿ ಹೋದಿರಿ ಎಂದಲ್ಲ. I have given you maximum time. ಎಲ್ಲರದ್ದೂ ಮುಗಿದ ಮೇಲೆ ಸಭೆಯನ್ನು ಅಡ್ಜರ್ನ್ ಮಾಡಿದ್ದುದು. But you are taking undue advantage of my liniency.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಕ್ಲಾರಿಫಿಕೇಷನ್ ಕೇಳುವುದಕ್ಕೆ ತಾವು ಅವಕಾಶ ಮಾಡಿ ಕೊಟ್ಟರೇ. ?

ಅಧ್ಯಕ್ಷರು.—ಅವರು ಸಬ್ಮಿಷನ್ ಮಾಡಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವತ್ತು ಮೆನ್‌ಷನ್ ಮಾಡಲಿ, ನಾಳೆ ಚರ್ಚೆಗೆ ತೆಗೆದುಕೊಳ್ಳಿ ಎನ್ನುವುದು ನಮ್ಮ ರಿಕ್ವೆಸ್ಟ್. ಚರ್ಚೆ ಇವತ್ತೇ ಪ್ರಾರಂಭವಾದರೆ ಇವತ್ತೇ ಮುಗಿಯಬೇಕು

ಶ್ರೀ ಕೆ. ಹೆಚ್. ಪಾಟೀಲ್.—ತಾವು ಹೇಳಿದ್ದುದು ನಿಜ. ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕಳಿಸಿದ್ದೇವೆ. ಪ್ರಿಯಾಂಬಲ್ ಹೇಳುತ್ತಾರೆ, ಅದಕ್ಕೆ ಅವಕಾಶ ಕೊಡಿ. ೪–೫ ಮಿನಿಟ್ ಆಗಬಹುದು. ಆಮೇಲೆ ನೀವು ಹೇಳಿರಿ. ಮಾನ್ಯ ಅಧ್ಯಕ್ಷರು ರೂಲಿಂಗ್ ಏನು ಹೇಳುತ್ತಾರೋ ಅದನ್ನು ನಾನು ಹೇಗೆ ಹೇಳಲಿ. What ruling the Speaker will give, I don't know. But we will have to abide by the ruling of the Speaker.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಡ್ಜರ್ನ್‌ಮೆಂಟ್ ಮೋಷನ್ ಪ್ರಾರಂಭ ಆದರೆ, ಇಂದೇ ಮುಗಿಯಬೇಕು. ಇವತ್ತು ಚರ್ಚೆ ಮಾಡೋಣ ಅಂದರೆ ಅದಕ್ಕೆ ನಾನು ಸಿದ್ಧನಿದ್ದೇನೆ. ನಾಳೆ ತೆಗೆದುಕೊಂಡರೆ ಒಳ್ಳೆಯದು.

ಶ್ರೀ ಎಂ. ಎಸ್. ಕೃಷ್ಣನ್.—ರೂಲ್ಸ್ ಆಫ್ ಪ್ರೊಸೀಜರ್ ತಮ್ಮ ಗಮನಕ್ಕೆ ತರಬೇಕಾಗಿದೆ ರೂಲ್ ೬೩ರ ಪ್ರಕಾರ....

ಅಧ್ಯಕ್ಷರು.—ಸ್ವಲ್ಪ ತಡೆಯಿರಿ. ನಿಮ್ಮ ಪ್ರಶ್ನೆಗೆ ಸಂಬಂಧಪಟ್ಟಂತೆ ಕರೆಕಳುಹಿಸಿದ್ದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಕಳುಹಿಸಿದ್ದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಇದರ ಬಗ್ಗೆ ಒಬ್ಬರೇ ಒಬ್ಬರು ಮಾತನಾಡಿ, ಆಮೇಲೆ ಒಪ್ಪಿಕೊಂಡು, ಮುಂದೆ ಹಾಕಬೇಕೆಂಬ ಅಭಿಪ್ರಾಯಕ್ಕೆ ಬಂದಹಾಗೆ ಕಾಣುತ್ತದೆ. ಆದರೆ, ರೂಲ್ ೬೩ರ ಪ್ರಕಾರ ಹೀಗೆ ಇದೆ.

> "Provided further that where the Speaker is not in possession of full facts about the matter mentioned therein, he may before giving or refusing his consent read the notice of the motion and hear from the Minister and/or members concerned a brief statement of facts and then give his decision on the admissibility of the motion"

So. you have to hear the members concerned and then give your decision, ಇದರ ಮೇಲೆ ಡಿಸ್ಕಷನ್ ಮಾಡಬಹುದು ಎಂದು ಕಾಣುತ್ತದೆ.

ನಿಲುವಳಿ ಸೂಚನೆ (ಮಂಡನೆಗೆ ಅನುಮತಿ ಕೋರಿಕೆ)

ಬಗರ್ ಹುಕುಂ ಸಾಗುವಳಿಯನ್ನು ಕ್ರಮಂ ಪಡಿಸುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಒಂದು ಪ್ರಾಮುಖ್ಯವಾದಂಥ ವಿಷಯದ ಮೇಲೆ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಇವತ್ತು ರಾಜ್ಯದಲ್ಲಿ ಅತಿವೃಷ್ಟಿಯಿಂದ ಸಾವಿರಾರು ಮನೆಗಳು ಬಿದ್ದು ಹೋಗಿ, ಲಕ್ಷಾಂತರ ಎಕರೆ ಭೂಮಿಯಲ್ಲಿರತಕ್ಕ ಬೆಳೆ ಹಾಳಾಗಿ ರೈತರಿಗೆ ತೊಂದರೆಯಾಗಿದೆ. ಎಲ್ಲಾ ವಿಷಯಗಳಿಗಿಂತ ಮುಖ್ಯವಾಗಿ ಈ ರಾಜ್ಯದ ರೈತರ ತೊಂದರೆ ಬಗ್ಗೆ ಇವತ್ತು ಇಲ್ಲಿ ಚರ್ಚೆ ಆಗಬೇಕಾಗಿದೆ. ಯಾವ ಸಮಸ್ಯೆ ಮುಖ್ಯವಾದದ್ದು ಎಂಬುದರ ಬಗ್ಗೆ ತಾವೇ ಯೋಚನೆ ಮಾಡಿ. ಅತಿವೃಷ್ಟಿಯಿಂದ ತೊಂದರೆಗೆ ಒಳಗಾದವರಿಗೆ ಇದುವರೆವಿಗೂ ಪರಿಹಾರ ಸಿಕ್ಕಿಲ್ಲ. ಇದರ ಜೊತೆಗೆ ಬಗರ ಹುಕುಂ ಸಾಗುವಳಿದಾರರ ಸಮಸ್ಯೆ ಕೂಡ ಇದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಸುಗ್ರೀವಾಜ್ಞೆಯನ್ನು ರಾಜ್ಯಪಾಲರಿಗೆ ಕಳುಹಿಸಿಕೊಟ್ಟು ವಾಪಸ್ಸು ತೆಗೆದುಕೊಂಡಿದ್ದಾರೆ ಇವತ್ತು ಈ ವಿಚಾರದಲ್ಲಿ ಅನೇಕ ಜಿಲ್ಲೆಗಳಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಇಂಥ ಪ್ರಾಮುಖ್ಯವಾದ ವಿಷಯಗಳಿಗೆ ಅವಕಾಶ ಕೊಡಬೇಕೇ ಹೊರತು ಬಾಕಿ ವಿಷಯಗಳಿಗೆ ಅಲ್ಲ. ಇವತ್ತು ಅತಿವೃಷ್ಟಿಯಿಂದ ಆಗಿರುವ ತೊಂದರೆಯ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ರೈತರಿಗೆ ಸಂಬಂಧಪಟ್ಟ ಹಾಗೂ ಬಗರ್‌ಹುಕುಂ ಸಾಗುವಳಿಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಪ್ರಾಮುಖ್ಯತೆ ಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಟೆಲಿಫೋನ್ ಹಗರಣ ಮುಖ್ಯವಲ್ಲ. ರೈತರ ಮತ್ತು ಬಗರ್ ಹುಕುಂ ಸಾಗುವಳಿದಾರರ ವಿಷಯವನ್ನು ಮೊದಲು ತೆಗೆದುಕೊಳ್ಳಿ.